# ನೆನಪುಗಳ ಸವಿಗನಸು ನನಸಾದಾಗ



ಇಪ್ಪತ್ತು ಮೂವತ್ತು ವರ್ಷಗಳ ಹಿಂದಿನ ನೆನಪು ಸದಾ ಮನಸ್ಸಿನಲ್ಲಿ ಹಸಿರು. ಶಾಲಾ ಕಾಲೇಜು ದಿನಗಳ ನೆನಪಂತೂ ಜೀವನದುದ್ದಕ್ಕೂ ನೆನಪಿನ ದೋಣಿಯಾಗಿ ಅದರಲ್ಲಿ ನಾವು ಪಯಣಿಗರಾಗಿಯೇ ಸಾಗುತ್ತೇವೆ. ಗೆಳೆಯ ಗೆಳತಿಯರ ಒಡನಾಟ ಎಂದಿಗೂ ಆಪ್ತ. ದಶಕಗಳನ್ನು ಕಳೆದರೂ ಮತ್ತೆ ಸಂಧಿಸುವ ಪ್ರಸಂಗ ಬಂದದ್ದು ನನ್ನ ಪಾಲಿನ ಸುದೈವ ಎಂದೇ ಹೇಳಬೇಕು.

■ ಚಿತ್ರಾ ಪ್ರಸನ್ನಕುಮಾರ ನಾಡಿಗೇರ್


ನಾನು ಆ ದಿನ ನನ್ನಲೇ ನಾನು ತನ್ಮಯಳಾದಾಗ ಬಂದಿತು ಗೆಳೆಯ ಗೆಳತಿಯರ ಅಕ್ಕರೆಯ ಸಕ್ಕರೆಯ ಕರೆ. ನಾನು ಮದುವೆಯಾಗಿ ಎಲ್ಲರನ್ನು ಅಗಲಿ ನನ್ನ ಪತಿ ಪ್ರಸನ್ನ ಅವರ ಜೊತೆಯಲ್ಲಿ ದೂರದ ದುಬಾಯ್‌ಗೆ ಹೋಗಿದ್ದೆ. ಮೂವತ್ತು ವರ್ಷ ಮಧುರ ಕ್ಷಣಗಳನ್ನು ಕಳೆದು ಮತ್ತೆ ತಾಯ್ನಾಡಿಗೆ ಬಂದಿದ್ದೆವು.

ಇಷ್ಟು ಸಂವತ್ಸರದಲ್ಲಿ ನಾನು ನನ್ನ ಕಲಿತ ಶಾಲೆಯ ಮತ್ತು ಕಾಲೇಜಿನ ಸಹಪಾಠಿಗಳ ಸಂಪರ್ಕದಿಂದ ದೂರವಿದ್ದೆ. ನಾನು ಕಲಿತ ಶಾಲೆಯ ಸಹಪಾಠಿಗಳು ಆಕಸ್ಮಿಕವಾಗಿ ನನ್ನ ಮೊಬೈಲ್ ನಂಬರ್ ಪತ್ತೆ ಹಚ್ಚಿದ್ದರು. ನಾನು ಅವರೆಲ್ಲರ ಧ್ವನಿ ಫೋನಿನಲ್ಲಿ ಕೇಳಿದಾಗ ಮನ ಹುಚ್ಚೆದ್ದು ಕುಣಿಯಿತು. ತನು ಕೇಕೆ ಹಾಕಿತು. ನನ್ನನ್ನು ನಾನೇ ನಂಬಲಾರದೆ ಹೋದೆ.

ನಾವು ದೀಪಾವಳಿಯಂದು 40 ವರ್ಷದ ನಂತರ ನನ್ನ ಡಾಕ್ಟರ್ ಗೆಳತಿ ನಾಗಮಣಿಯ ಮನೆಯಲ್ಲಿ ಸೇರಬೇಕೆಂದು ತೀರ್ಮಾನಿಸಿದೆವು. ಇಷ್ಟು ವರ್ಷಗಳ ನಂತರ ಅವರನ್ನೆಲ್ಲಾ ಸ್ಕೂಲ್ ಯೂನಿಫಾರಂಗಳಲ್ಲಿದ್ದ ಎಳೆ ಮುಖಗಳನ್ನು ನೋಡಿದ್ದಷ್ಟೇ ನೆನಪು. ಹೇಗಪ್ಪ ಅವರನ್ನೆಲ್ಲಾ ಗುರುತಿಸುವುದು ಎಂದು ಯೋಚನೆ ಮಾಡುವಷ್ಟರಲ್ಲಿ ನಾನು ನಾಗಮಣಿಯ ಮನೆಯ ಬಾಗಿಲಲ್ಲಿ ನಿಂತಿದ್ದೆ. ನಾಗಮಣಿಯ ಸುಂದರ, ಸುಸಜ್ಜಿತ ಭವ್ಯವಾದ ಮನೆಯನ್ನು ನೋಡಿ ದಂಗಾದೆ.

ಎಲ್ಲರ ಮುಖಗಳ ಮೇಲೆ ಎಳೆ ಕಳೆ ಮಾಯವಾಗಿ ಜೀವನದ ಏರಿಳಿತಗಳಲ್ಲಿ ಸ್ವಲ್ಪ ಹಣ್ಣಾಗಿತ್ತು. ಆದರೆ ನಮ್ಮ ಉತ್ಸಾಹಕ್ಕೆ ಕಿಂಚಿತ್ತೂ ಕುಂದು ಬಂದಿರಲಿಲ್ಲ. ಎಲ್ಲರನ್ನೂ ನೋಡಿ ಆನಂದಬಾಷ್ಪದಿಂದ ಕಣ್ಣಾಲಿಗಳು ಬಿಂದು ಬಿಂದುಗಳಾಗಿ ಮಿಂದವು. ಅಲ್ಲಿಂದ ಅಲ್ಪ ಉಪಾಹಾರದ ನಂತರ ನಾವೆಲ್ಲಾ ಡಾ. ಬಾಲಚಂದ್ರ ಅವರ ಮನೆಗೆ ಬಂದೆವು. ಅವರ ಮಡದಿ ಸುಜಾತಾ ಮಾಡಿದ ಬಿಸಿ ಬಿಸಿ ಸಮೋಸ ಸವಿದೆವು. ನಾನು ಮನೆಯಲ್ಲಿ ಮಾಡಿ ತಂದಿದ್ದ 'ನಾನ್ ಕತಾಯ್' ಕ್ಷಣದಲ್ಲಿ ಖತಂ ಆಯಿತು. ಬ್ಯಾಂಕರ್ ವಸಂತಿ ತಂದ ಡ್ರೈ ಫ್ರೂಟ್ಸ್ ಬಾಯಿಯನ್ನು ಸೇರುತ್ತಲೇ ಡೆಬಿಟ್ ಆಯಿತು. ಆ್ಯಕ್ಟರ್ ಗೆಳತಿ ಅಶ್ವನಿ ರಂಗ ಅವರ ಇಂಪಾದ ದನಿಯಲ್ಲಿ ಹಾಡಿದ ಹಾಡನ್ನು ಕೇಳಿ ಮತ್ತೆ ಶಾಲೆಯ ದಿನಗಳು ನೆನಪಾದವು. ಡಾ. ಬಾಲಚಂದ್ರ ಬಂದು ಸಣ್ಣ ಕಾಫಿ ಮಗ್ಗಿನಲ್ಲಿ ಮೂಡಿದ್ದ ಚಿತ್ರವನ್ನು ಹತ್ತಿಪ್ಪತ್ತು ಪಟ್ಟು ದೊಡ್ಡದಾಗಿ ರಂಗೋಲಿ ರೂಪದಲ್ಲಿ ನೆಲದ ಮೇಲೆ ಮೂಡಿಸಿದ್ದನ್ನು ನೋಡಿ ನಾವೆಲ್ಲಾ ಮೂಕವಿಸ್ಮಿತರಾದೆವು. ಪೊಲಿಟಿಕ್ಸ್ ನಿಂದ ಹಿಡಿದು ಪೆನ್ಷನ್‌ವರೆಗೂ ನಾವೆಲ್ಲಾ ಚರ್ಚಿಸಿದೆವು. ನಮಗೆ ಪಾಠ ಹೇಳಿಕೊಟ್ಟ ನಮ್ಮ ಗುರುಹಿರಿಯರನ್ನು ಸ್ಮರಿಸಿದೆವು. ನಾವು ಆಟ ಪಾಠದೊಡನೆ ಕೀಟಲೆ ಗಲಾಟೆ ಮಾಡುತ್ತಿದ್ದುದನ್ನು ನೆನಪಿಸಿಕೊಂಡು ನಕ್ಕೆವು. ನಮಗೆ ಕಲಿಸಿ ನಲಿಸಿ ದೊಡ್ಡವರನ್ನಾಗಿ ಮಾಡಿದ ನಮ್ಮ ಎನ್‌ಇಇಎಸ್ ಶಾಲೆಯನ್ನು ಮರೆಯಲು ಸಾಧ್ಯವೆ? ನಾವು ನಮ್ಮ ಶಾಲೆಗೆ ಚಿರಋಣಿಗಳು.

ಅಂತಿಮವಾಗಿ ಎಲ್ಲರನ್ನು ಬೀಳ್ಕೊಟ್ಟು ಮನೆಗೆ ಹಿಂತಿರುಗುವಾಗ ಏನೋ ಅಮಿತ ಐಶ್ವರ್ಯವನ್ನು ಪಡೆದಂತೆ ಭಾಸವಾಯಿತು. ಮತ್ತೆ ಮತ್ತೆ ಇಂತಹ, ಮಧುರ ಕ್ಷಣಗಳು ಬರಲಿ ಎಂದು ಮೆಲುಕು ಹಾಕುತ್ತ ಹೋದಾಗ ಮನೆಯಲ್ಲಿ ನನ್ನ ಮುದ್ದು ಮೊಮ್ಮಗನ ಆಲಿಂಗನ ನನಗಾಗಿ ಕಾದಿತ್ತು.




## ಮರೆಯಲಾದೀತೇ ನಾಟಕದ ಪಾತ್ರ..!

ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ಭಾಗವಹಿಸಿದ ನೆನಪುಗಳನ್ನು ಹಂಚಿಕೊಳ್ಳದಿದ್ದರೆ ಹೇಗೆ? ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ವೇದಿಕೆ ಮೇಲೆ ಪ್ರಸ್ತುತಪಡಿಸಿದ ರಂಗನಾಟಕ ಇಂದಿಗೂ ಮನದಾಳದಲ್ಲಿ ಹಸಿರಾಗಿದೆ. ನಾಟಕದ ಪಾತ್ರದಲ್ಲಿ ಜೀವತುಂಬಿ ನೋಡುಗರ ಮನಸ್ಸನ್ನು ಗೆದ್ದ ತೃಪ್ತಿ ನಮಗಿತ್ತು. ಇದಕ್ಕಾಗಿ ನನ್ನನ್ನು ಹುರಿದುಂಬಿಸಿ ಪ್ರೋತ್ಸಾಹಿಸಿದ ಶಿಕ್ಷಕರು, ಹೆತ್ತವರು ಸದಾ ಋಣಿಗಳು. ಸವಿನೆನಪಿನ ಸಾಲಿಗೆ ನಾಟಕದ ಪಾತ್ರ ಸೇರಿ ಅದೊಂದು ಅದ್ಭುತ ರಸಪಾಕವೇ ಆಗಿತ್ತು. ■